ಅ.ದಾ. ಸಂಃ 397/2017 ಪಿ.ಡಬ್ಲ್ಯು: 01

ದಿಃ 07-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ. ಟಿ.ಕೆ.ವಿ **1** ನೇ ಪ್ರತಿವಾದಿ ಪರ ವಕೀಲರಿಂದಃ

ನನಗೆ ಕಾನೂನಿನ ಬಗ್ಗೆ ಅರಿವು ಇದೆ ಎಂದರೆ ಸರಿ. ನಿಪಿ-1 ರಲ್ಲಿ ಕ್ರಯ ಪತ್ರವನ್ನು ಮಾಡಿಕೊಡಲು ಆರು ತಿಂಗಳ ಕಾಲಾವಧಿಯನ್ನು ನಿಗಧಿ ಪಡಿಸಲಾಗಿದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಪ್ರತಿವಾದಿಯವರು ಇ-ಖಾತೆ ಮಾಡಿಸಿಕೊಂಡು ಬರಲು ಕಾಲಾವಕಾಶ ಬೇಕು ಎಂದು ಅವರೇ ಕೇಳಿದ್ದರು ಎಂದು ನುಡಿಯುತ್ತಾರೆ. 6 ತಿಂಗಳು ಕಳೆದ ನಂತರ ನಾನು ಯಾವುದೇ ನೋಟೀಸನ್ನು ನಿಡಿರುವುದಿಲ್ಲ. ಸಾಕ್ಷಿ ಮುಂದುವರೆದು ಮೌಕಿಕವಾಗಿ ಕೇಳಿದ್ದೆನು ಎಂದು ನುಡಿಯುತ್ತಾರೆ. ನನಗೆ ನೋಟೀಸ್ನ ನೀಡಲು ಯಾವುದೇ ತೊಂದರೆ ಇರಲಿಲ್ಲ. ನಿಪಿ-2 ರ ನೋಟೀಸನ್ನು ನೀಡುವ ಕಾಲಕ್ಕೆ ನಮ್ಮ ಗ್ರಾಮ ಪಂಚಾಯಿತಿಗೆ ಹೋಗಿ ಪ್ರತಿವಾದಿಗಳ ಹೆಸರಿಗೆ ಇ-ಖಾತೆ ಆಗಿದೆಯೇ ಇಲ್ಲವೋ ಎಂಬುದರ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

ನಿಪಿ-1 ರ ಕಾರಾರು ಪತ್ರವನ್ನು ನಾನು ಮತ್ತು 1 ನೇ ಪ್ರತಿವಾದಿಯು ಸಂಜೆ ಸುಮಾರು 5-00 ಗಂಟೆ ಸಮಯದಲ್ಲಿ ಸೇರಿ ತಯಾರಿಸಿರುತ್ತೇವೆ. ಶೆಡ್ಯೂಲ್ ಸ್ವತ್ತಿನ ಸ್ವಾಧಿನವನ್ನು ಆ ದಿನ ಬಿಟ್ಟು ಕೊಟ್ಟಿರುವುದರ ಬಗ್ಗೆ ಅಥವ ಬಿಟ್ಟು ಕೊಡದೆ ಇರುವ ಬಗ್ಗೆ ನಿಪಿ-1 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸ್ವಾಧಿನದ ಬಗ್ಗೆ ನಿಪಿ-1 ರಲ್ಲಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ನಾನು ಪ್ರತಿವಾದಿಗಳ ವಿರುದ್ಧ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ದಿನಾಂಕ 28-09-2017 ರಂದು ಗೌರಿಬಿದನೂರು ಪುರ ಪೋಲೀಸ್ ಠಾಣೆಯಿಂದ ನೀಡಿರುವ ಹಿಂಬರಹದ

ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ್ದು ಸದರಿ ಹಿಂಬರಹದ ದೃಢೀಕೃತ ನಕಲನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ತಾನು ನೀಡಿರುವ ದೂರಿನ ದೃಢೀಕೃತ ನಕಲುನ್ನು ತೋರಿಸಿ ಸಾಕ್ಷಿಯು ಅದನ್ನು ಗುರುತಿಸಿದ್ದು ಸದರಿ ದೂರಿನ ದೃಢೀಕೃತ ನಕಲನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ 1 ನೇ ಪ್ರತಿವಾದಿಯು ಪೋಲೀಸರಿಗೆ ನೀಡಿರುವ ಹೇಳಿಕೆಯ ದೃಢಕೃತ ನಕಲುನ್ನು ತೋರಿಸಿ ಸಾಕ್ಷಿಯು ಅದನ್ನು ಗುರುತಿಸಿದ್ದು ಸದರಿ ಹೇಳಿಕೆಯ ದೃಢೀಕೃತ ನಕಲನ್ನು ನಿಡಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ದೂರಿನೊಂದಿಗೆ ನೀಡಿದ ಕ್ರಯದ ಕರಾರು ಪತ್ರ ಮತ್ತು ಇ-ಖಾತೆಯ ಫೋಟೊ ಕಾಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ ಆದರೆ ಅವು ಫೋಟೋ ಕಾಪಿ ಆಗಿರುವ ಕಾರಣ ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಿರುವುದಿಲ್ಲ.

ನಾನು ಪೋಲೀಸರಿಗೆ ಕ್ರಯದ ಕರಾರು ಪತ್ರದ ಅಸಲೀ ಪ್ರತಿಯನ್ನು ನನ್ನ ದೂರಿನೊಂದಿಗೆ ನೀಡಿರುವುದಿಲ್ಲ ಎಂದರೆ ಸರಿ. ನಾನು ಪೋಲೀಸರಿಗೆ ದೂರು ನೀಡಿ ಹಿಂಬರಹವನ್ನು ಪಡೆದ ತಕ್ಷಣ ಪ್ರತಿವಾದಿಗಳಿಗೆ ನೋಟೀಸನುನ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಕ್ರಯ ಮಾಡಿಕೊಡುತ್ತೇವೆ ಎಂದು ಪ್ರತಿವಾದಿಗಳು ನನಗೆ ಹೇಳಿದರು ಎಂದು ನುಡಿಯುತ್ತಾರೆ. ಕ್ರಯ ಪತ್ರವನ್ನು ಮಾಡಿಕೊಡುತ್ತೇವೆ ಎಂದು ನಿಡಿ-3 ರ ಸ್ಟೇಟ್ಮೆಂಟ್ ನಲ್ಲಿ ಹೇಳಿರುವುದಿಲ್ಲ. ನಿಪಿ-1 ರ ಕ್ರಯದ ಕರಾರು ಪತ್ರದ ಮೂಲ ಪ್ರತಿಯ ಫೋಟೋ ಕಾಪಿಯನ್ನು ಪೋಲೀಸರಿಗೆ ನನ್ನ ದೂರನೊಂದಿಗೆ ನೀಡಿರುತ್ತೇನೆ ಎಂದರೆ ಸರಿ. ನಾನು ಪೋಲೀಸರಿಗೆ ದೂರು ನೀಡಿರುವ ವಿಚಾರವನ್ನು ನಿಪಿ-2 ರ ತಿಳುವಳಿಕೆ ಪತ್ರದಲ್ಲಿ ನಮೂದಿಸಿರುವುದಿಲ್ಲ. ನಿಪಿ-2 ರಲ್ಲಿ ಬರೆದಿರುವ ವಿಚಾರಗಳನ್ನು

ನಾನೇ ನೀಡಿರುತ್ತೇನೆ.  ಪೋಲೀಸರಿಗೆ ದೂರು ನೀಡಿದ ವಿಚಾರವನ್ನು ನಿಪಿ-2 ರಲ್ಲಿ ತಿಳಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಸಾಮಾನ್ಯವಾಗಿ 2-3 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣದ ವ್ಯವಹಾರವನ್ನು ಚೆಕ್ ಅಥವಾ ಡಿಡಿ ಮೂಲಕ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಆದರೆ ನಾನು ನಗದನ್ನು ನೀಡಿದ್ದೆ ಎಂದು ನಡಿಯುತ್ತಾರೆ.  ನನಗೆ ಹಣಕಾಸಿನ ವ್ಯವಹಾರಗಳ ಬಗ್ಗೆ ಅರಿವಿದ್ದು ನ್ಯಾ. ಮಂದೆ ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಕರಾರು ಪತ್ರವು ಸುಳ್ಳು ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ.  ನಿಪಿ-1 ರಲ್ಲಿ ಇರುವ ಸಹಿಯು 1 ನೇ ಪ್ರತಿವಾದಿಯ ಸಹಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ದಿನಾಂಕ 30-10-2017 ರಂದು ನಾನು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಕ್ರಯ ಪತ್ರವನ್ನು ಬರೆಸಿಕೊಳ್ಳಲು ತಯಾರಿದ್ದೆನು ಎಂದು ನಿಪಿ-2 ರ ತಿಳುವಳಿಕೆ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ.  ಈ ವಿಚಾರವನ್ನು ನನ್ನ ವಾದ ಪತ್ರದಲ್ಲಿಯೂ ಸಹ ನಮೂದಿಸಿರುತ್ತೇನೆ.  ದಿನಾಂಕ 30-10-2017 ರಂದು ಕ್ರಯ ಪತ್ರ ಮಾಡಿಕೊಳ್ಳಲು ತಯಾರಿದ್ದೆ ಎಂದು ತೋರಿಸಲು ಡ್ರಾಫ್ಟ್ ಕ್ರಯ ಪತ್ರವನ್ನು ನಿಪಿ-2 ರ ತಿಳುವಳಿಕೆ ಪತ್ರದೊಂದಿಗೆ ಪ್ರತಿವಾದಿಗಳಿಗೆ ಕಳುಹಿಸಿರುವುದಿಲ್ಲ.  ಸಾಕ್ಷಿಯು ಮುಂದು ವರೆದು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಡ್ರಾಫ್ಟ್ ಕ್ರಯ ಪತ್ರವನ್ನು ನನ್ನ ಬಳಿ ಇಟ್ಟುಕೊಂಡಿದ್ದೆನು ಎಂದು ನುಡಿಯುತ್ತಾರೆ.  ತಾಯಾರಾಗಿದ್ದ ಡ್ರಾಫ್ಟ್ ಕ್ರಯ ಪತ್ರವನ್ನು ನ್ಯಾ. ಹಾಜರು ಪಡಿಸಿಲ್ಲ.  ಪ್ರತಿವಾದಿಗಳಿಗೆ ರೂ .50,000/- ಗಳನ್ನು ನೀಡಲು ತಯಾರಿದ್ದೆನು ಮತ್ತು ನನ್ನ ಬಳಿ ರೂ.50,000/- ಹಣವಿತ್ತು ಎಂದು ತೋರಿಸುವ ದಾಖಲೆಯನ್ನು ನಿಪಿ-2 ರ ತಿಳುವಳಿಕೆ ಪತ್ರದೊಂದಿಗೆ ಪ್ರತಿವಾದಿಗಳಿಗೆ ಕಳುಹಿಸಿರುವುದಿಲ್ಲ.

ನಿಪಿ-2 ರ ತಿಳುವಳಿಕೆ ಪತ್ರದ ದಿನಾಂಕ ದಿಂದ ಇಲ್ಲಿಯ ವರೆಗೆ ನನ್ನ ಬಳಿ ರೂ.50,000/- ಗಳು ಇದೆ ಎಂದು ತೋರಿಸಲು ನ್ಯಾ ಕ್ಕೆ ದಾಖಲೆಯನ್ನು ಹಾಜರುಳಿಡಿಸಿಲ್ಲ. ನಿಪಿ-7 ರ ಶುದ್ಧ ಕ್ರಯ ಪತ್ರದ ಬಗ್ಗೆ ನಿಪಿ-2 ನನ್ನ ತಿಳುವಳಿಕೆ ಪತ್ರದಲ್ಲಿ ತಿಳಿಸಿಲ್ಲ. 1 ನೇ ಪ್ರತಿವಾದಿಯು ನನ್ನ ಊರಿನ ಪಕ್ಕದಲ್ಲಿರುವ ಊರಿನ ನಿವಾಸಿ ಎಂದರೆ ಸರಿ. 1 ನೇ ಪ್ರತಿವಾಯ ತಂದೆಯವರು ಸರ್ಕಾರಿ ನೌಕರಾಗಿದ್ದರು ಎಂದರೆ ಸರಿ. ನಿಪಿ-1 ರ ಕರಾರು ಪತ್ರದ ಸಮಯದಲ್ಲಿ 1 ನೇ ಪ್ರತಿವಾದಿಯು ಬಿ.ಕಾಂ ವಿದ್ಯಾರ್ಥಿ ಆಗಿದ್ದರು ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ನಿಪಿ-1 ರ ಕರಾರು ಪತ್ರದ ಸಮಯದಿಲ್ಲಿ ವಿದ್ಯಾರ್ಥಿ ಆಗಿದ್ದು ಮತ್ತು ಅವರ ತಂದೆ ಸರ್ಕಾರಿ ನೌಕರರಾಗಿದ್ದು ತಮ್ಮ ಕುಟುಂಬವನ್ನು ನೋಡಿಕೊಳ್ಳು ಅವಶ್ಯಕತೆ 1 ನೇ ಪ್ರತಿವಾದಿಗೆ ಇರಲಿಲ್ಲ ಎಂದರೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆಗೆ 1 ನೇ ಪ್ರತಿವಾದಿಯು ನನ್ನ ಬಳಿ ಬಂದು ದಾವಾ ಸ್ವತ್ತನ್ನು ಮಾರಟ ಮಾಡುವ ಉದ್ದೇಶವನ್ನು ವ್ಯಕ್ತಪಡಿಸಿದ್ದರು ಎಂದು ನುಡಿಯುತ್ತಾರೆ. ನಿಪಿ-1 ರ ಕರಾರು ಪತ್ರದ ಬಗ್ಗೆ 1 ನೇ ಪ್ರತಿವಾದಿಯ ತಂದೆಯ ಬಳಿ ಹೋಗಿ ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಸ್ವತ್ತು ತನ್ನ ಸ್ವಯರ್ಜಿತ ಸ್ವತ್ತು ಎಂದು 1 ನೇ ಪ್ರತಿವಾದಿಯು ನನಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ.

ನಿಪಿ-1 ರ ಕರಾರು ಪತ್ರದ ಮುಂಚಿತವಾಗಿ 1 ನೇ ಪ್ರತಿವಾದಿಯವರು ನನಗೆ ಪರಿಚಯವಿದ್ದರು. ದಾವಾ ಸ್ವತ್ತನ್ನು ಮಾರಾಟ ಮಾಡುವ ಆಫರ್ ಅನ್ನು 1 ನೇ ಪ್ರತಿವಾದಿಯು ನೀಡಿದಾಗ ಅವರೊಂದಿಗೆ ಸಾಕ್ಷಿಯಾದ ನವೀನ್ ರವರು ಇದ್ದರು. ದಾವಾ ಸ್ವತ್ತನ್ನು ಮಾರಾಟ ಮಾಡುವ ಮತ್ತು ಖರೀದಿಸುವ ಮಾತುಕತೆ ಆಗುವ ಸಮಯದಲ್ಲಿ ನಮ್ಮೊಂದಿಗೆ ನವೀನ್‌ರವರು ಇದ್ದರು ಎಂಬ ವಿಚಾರವನ್ನು ನಿಪಿ-2

ಮತ್ತು ನನ್ನ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ-6 ಮತ್ತು 7 ರ ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಮೊತ್ತವು ನಿಪಿ-1 ರ ಕರಾರು ಪತ್ರದಲ್ಲಿ ನಮೂದು ಮಾಡಿರುವ ಮೊತ್ತಕ್ಕಿಂತ ಕಡಿಮೆ ಇದೆ ಎಂದರೆ ಸಾಕ್ಷಿ ಕ್ರಯ ಪತ್ರಗಳನ್ನು ನಾನು ನೊಡಿದ್ದೇನೆ ಆದರೆ ಅದರಲ್ಲಿ ಬರೆದಿರುವ ಮೊತ್ತಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಕ್ರಯ ಪತ್ರದ ಮೂಲದ ಪ್ರತಿವಾದಿಯು ಎಷ್ಟು ಹಣ ಪಡೆದುಕೊಂಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯಿಂದ ಹೆಚ್ಚು ಹಣವನ್ನು ಪಡೆಯ ಬೇಕು ಎಂಬ ಉದ್ದೇಶದಿಂದ ನಿಪಿ-1 ರ ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)**

ಮರು ವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು